**ಬೆಂಗಳೂರಿಗೆ ಒಳಹೋಗುವ ದಾರಿಗಳು ಮಾತ್ರ ಅಲ್ಲ, ಹೊರಬರುವ ಮಾರ್ಗಗಳೂ ಇವೆ. ಒಳಬರುತ್ತೇವೋ, ಹೊರಹೋಗುತ್ತೇವೋ ಎನ್ನುವುದು ಯಾವ ಬಸ್ಸನ್ನು ಹತ್ತುತ್ತೇವೆನ್ನುವುದರ ಮೇಲೆ ನಿರ್ಧಾರವಾಗುತ್ತದೆ. ತಾನೀಗ ಬಸ್ಸು ಬದಲಿಸುವ ಸಮಯ ಬಂದಿದೆ ಎಂದುಕೊಂಡ ಶಿಶಿರ...**

"ಕನಿಷ್ಠ ಏಳೂವರೆಯಿಂದ ಎಂಟು ಲಕ್ಷ ಸಾಲ ಮಾಡ್ಬೇಕಾತ್ ಕಾಣಿ. ತಿಂಗ್ಳಿಗೆ ಹತ್ ಸಾವ್ರ ಕಟ್ರೂ ತೀರ್ಸೂಕೆ ಹತ್ತು ವರ್ಷ ಬೇಕಾತ್ ನಿಮ್ಗೆ..."

ಶಿಶಿರ್ ಅರೆಕ್ಷಣ ಆಕಾಶದತ್ತ ನೋಡಿ ಕಣ್ಮುಚ್ಚಿಕೊಂಡಿದ್ದ. ಎಂಟು ಲಕ್ಷ ಅವನಿಗೆ ದೊಡ್ಡ ಮೊತ್ತವಾಗಿ ಕಂಡಿರಲಿಲ್ಲ. ಅದನ್ನು ತೀರಿಸಲು ಬೇಕಾಗಿದ್ದ ಹತ್ತು ವರ್ಷವೂ ದೊಡ್ಡ ಅವಧಿಯೆನ್ನಿಸಿರಲಿಲ್ಲ. ಆದರೆ ಅದಕ್ಕೋಸ್ಕರ ಬೆಂಗಳೂರಿನ ಕಂಪನಿಗಳಲ್ಲಿ ಜೀತ ಮಾಡುತ್ತಾ, ಬಿಪಿ, ಶುಗರ್, ಬೊಜ್ಜುಗಳನ್ನು ಬೆಳೆಸಿಕೊಳ್ಳುತ್ತಾ ಕಳೆದುಕೊಳ್ಳಬೇಕಾದ ಅಮೂಲ್ಯ ಹತ್ತು ವರ್ಷಗಳಿದ್ದಾವಲ್ಲಾ? ಅದೇ ಅವನನ್ನು ಚಿಂತೆಗೀಡುಮಾಡಿದ್ದು. ಹೀಗೆ ಚಿಕ್ಕ ಚಿಕ್ಕ ಲೆಕ್ಕಾಚಾರಗಳೂ ದೊಡ್ಡ ದೊಡ್ಡ ಋಣಸಂದಾಯಗಳಾಗಿ ಮಧ್ಯಮ ವರ್ಗದವರ ಇಡೀ ಬದುಕನ್ನೇ ನುಂಗಿಹಾಕುವುದೆನ್ನುವ ಸತ್ಯ ಆಗಷ್ಟೇ ಅವನಿಗೆ ಅರಿವಾಗಿತ್ತು.

ಯೋಚನೆಗಳಲ್ಲಿ ಮುಳುಗಿ ನಡೆದವನ ಕಣ್ಣಿಗೆ ಅಲ್ಲೇ ಪಕ್ಕದ ತಗ್ಗಿನಲ್ಲಿ ಗಾಳಿಯ ಭಯಕ್ಕೆ ಪತರುಗುಟ್ಟುವಂತೆ ಹೊಯ್ದಾಡುತ್ತಾ ನಿಂತಿದ್ದ ಅಡಿಕೆ ತೋಟ ಕಂಡಿತು. ಪ್ರತೀ ಬಾರಿ ಗಾಳಿ ಬೀಸಿದಾಗಲೂ ಅಡಿಕೆ ಮರಗಳು ಒಂದಕ್ಕೊಂದು ಜಪ್ಪಿಕೊಂಡು ಕಾಯಿಗಳು ಮರದಿಂದುದುರಿ ಹೆಡಿಲನ ಗರಿಗಳ ಮೇಲೆ ಬೀಳುತ್ತಿದ್ದ ಪಟಪಟ ಸದ್ದು ಕರ್ಕಶವಾಗಿ ಕೇಳುತ್ತಿತ್ತು. ಅಲ್ಲಿ ಕೊಡೆ ಹಿಡಿದು ಮಳೆ ಮಾಡುತ್ತಿರುವ ಅವಾಂತರಗಳನ್ನು ಪರೀಕ್ಷಿಸುತ್ತಾ ನಿಂತಿದ್ದ ಅಪ್ಪ ಹಾಗೂ ಕೊನೆಗಾರ ಮಾದು ಆಡುತ್ತಿದ್ದ ಮಾತುಗಳು ಸ್ಪಷ್ಟವಾಗಿಯೇ ಅವನ ಕಿವಿ ತಲುಪಿದವು.

"ಕೊನೆಗೂ ಕೊಳೆರೋಗ ಬಂದೇ ಬಿಡ್ತಲ್ಲ ರಾಗಯ್ಯ?"

ಮಾದುವಿನ ಮಾತು ಬಾಯೊಳಗೆ ತುಂಬಿಕೊಂಡಿರುವ ಕವಳದ ನಡುವೆ ಕಷ್ಟದಿಂದ ಹಾದು ಹೊರಬಂತು.

"ಹೌದ್ ಮಾರಾಯಾ. ನಾಲ್ಕ್ ಸಲ ಔಷ್ಧಿ ಹೊಡೆಸಿದ್ರೂ ಬಂದೇ ಬಿಡ್ತು ದರಿದ್ರದ ಕೊಳೆ. ಈ ಬಾರಿ ಹೋದ್ಸಲದ ಕಾಲು ಭಾಗ ಬೆಳೆಯೂ ಬರೋದಿಲ್ವಾಂತ..."

ಕೊಳೆತು ಉದುರಿದ ಅಡಿಕೆಯೊಂದನ್ನು ಶವದಂತೆ ಎತ್ತಿಕೊಂಡು ಕೈಯಲ್ಲಿ ಹಿಡಿದಿದ್ದ ಅಪ್ಪ ಭಾರವಾದ ದನಿಯಲ್ಲಿ ಹಾಗಂತ ಹೇಳಿದ.

"ಹ್ವಾದ್ರೆ ಹ್ವಾಗ್ಲಿ... ತಲೆ ಕೆಡ್ಸ್ಕಬೇಡಿ ಹ್ವಾಯ್. ಹೆಂಗಿದ್ರೂ ಮಗ ಬೆಂಗ್ಳೂರಂಗಿದ್ನಲೆ. ಎಷ್ಟ್ ಮಳಿ ಹೊಯ್ದ್ರೂ ಸಾಫ್ಟ್‌ವೇರ್ ಕಂಪ್ನಿಗೆ ಕೊಳೆರೋಗ ಬತ್ತಿಲ್ಲೆ ಬಿಡಿ..."

ಹಲ್ಕಿರಿಯುತ್ತಾ ನುಡಿದ ಮಾದುವಿನ ಕೆಂಪು ಹಲ್ಲುಗಳಿಗಿಂತಲೂ ಅವನ ಮಾತುಗಳೇ ಹೆಚ್ಚು ಸಹಿಸಲಸಾಧ್ಯವೆನಿಸಿತು ಶಿಶಿರನಿಗೆ. ಆ ಮಾತುಗಳಿಂದಲೋ, ಅಲ್ಲಿ ಆ ಕ್ಷಣಕ್ಕೆ ಉತ್ಪತ್ತಿಯಾದ ನಿರೀಕ್ಷೆಯ ಹೊರೆಯಿಂದಲೋ ಪಾರಾಗುವುದಕ್ಕೇನೋ ಎಂಬಂತೆ ಬಿರಬಿರನೆ ಬಸ್ ನಿಲ್ದಾಣದತ್ತ ಹೆಜ್ಜೆ ಹಾಕತೊಡಗಿದ.